**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾಗಳ ನ್ಯಾಯಾಲಯ, ಯಾದಗಿರಿ**

**ಸಿ.ಸಿ. ನಂ.1247/2022**

ಫಿರ್ಯಾದುದಾರರು: ಶ್ರೀ ಅಯ್ಯಪ್ಪ ತಂದೆ ನರೇಂದರ ರಾಠೋಡ್.

ವಿರುದ್ಧ

ಆಪಾದಿತ: ಶ್ರೀ ಪಿ. ಸೂರ್ಯನಾರಾಯಣ.

ಆಪಾದನೆ

ಶ್ರೀ ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,**(Honors)** ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.

ದೂರುದಾರ ಹಾಗೂ ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಅಪಾದಿತನಾದ ನೀವು ಗುತ್ತೆಗೆದಾರ ಮತ್ತು ಶ್ರೀ ಚೈತನ್ಯ ಕನಸ್ಟ್ರಕ್ಷನ್ಸ ಕಂಪನಿಯ ಮಾಲಿಕನಾಗಿದ್ದು, ಗೋದಾಮು ಮತ್ತು ವೇರ್ ಹೌಸ್ ಕಟ್ಟಿಕೊಡುವುದಾಗಿ ಒಪಿಕೊಂಡು ದಿನಾಂಕ 15.03.2019 ರಂದು ದೂರುದಾರರಿಂದ ರೂ.30,00,000/- ಹಣ ಪಡೆದುಕೊಂಡಿರುತ್ತೀರಿ. ಅಲ್ಲದೇ ನಂತರ ಕಟ್ಟಡ ಸಾಮಾಗ್ರಿ ಖರೀದಿಸಲು ದೂರುದಾರರಿಂದ ಜುಲೈ 2019 ರಲ್ಲಿ ರೂ.25,00,000/- ಹಣ ಪಡೆದುಕೊಂಡಿರುತ್ತೀರಿ. ಈ ರೀತಿ ಹಣ ಪಡೆದು ಆ ನಂತರ ದೂರುದಾರ ವೇರ್ ಹೌಸ್ ಕಟ್ಟಡ ಪ್ರಾರಂಭಿಸುವಂತೆ ಕೇಳಿಕೊಂಡಾಗ ನೀವು ಅದಕ್ಕೆ ನಿರಾಕರಿಸಿ ದೂರುದಾರರಿಗೆ ಹಣ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ದೂರುದಾರರಿಗೆ ನಿಮ್ಮ ಐ.ಸಿ.ಐ.ಸಿ.ಐ ಬ್ಯಾಂಕ್, ನಲ್ಲಕುಂಟ ಶಾಖೆ, ಹೈದ್ರಾಬಾದ ಖಾತೆಯ **000335** ಸಂಖ್ಯೆಯ ಚೆಕ್ ನಲ್ಲಿ ರೂ**. 25,00,000/-** ದಿನಾಂಕ **30.12.2021** ಮತ್ತು **000336** ಸಂಖ್ಯೆಯ ಚೆಕ್ ನಲ್ಲಿ ರೂ**. 30,00,000/-** ದಿನಾಂಕ **10.01.2022** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿರುತ್ತೀರಿ. ಸದರಿ ಚೆಕ್‌ನ್ನು ದೂರುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಹೆಚ್.ಡಿ.ಎಫ್.ಸಿ ಬ್ಯಾಂಕ್, ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ**, 000335** ಸಂಖ್ಯೆಯ ಚೆಕ್ "Cheque Stale" ಎಂಬ

ಹಿಂಬರಹದೊಂದಿಗೆ ಮತ್ತು **000336** ಸಂಖ್ಯೆಯ ಚೆಕ್ "funds insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ದಿನಾಂಕ **30.03.2022** ರಂದು ವಾಪಸ್ಸು ನೀಡಿರುತ್ತಾರೆ. ನಂತರ ದೂರುದಾರರು ತಮ್ಮ ವಕೀಲರ ಮೂಲಕ ದಿನಾಂಕ **26.04.2022** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ **30.04.2022** ರಂದು ಜಾರಿಯಾಗಿರುತ್ತದೆ. ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್ ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138** ರ ರಿತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ- 1 : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು
ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ
ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

(ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.)

ದಿನಾಂಕಃ 23.01.2026.
ಸ್ಥಳಃ ಯಾದಗಿರ

ಪ್ರಧಾನ ದಿವಾಣಿ ನ್ಯಾಯಾಧಿಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಯಾದಗಿರಿ.